ಒಂದು ತಿಂಗಳಾದ ಮೇಲೆ ಅಬೂಲ್ ಮನೆಗೆ ಬಂದಾಗ ಹೆಂಡತಿಯನ್ನ ಬಿಟ್ಟುಬಿಡುವಂತೆ ಆಜ್ಞಾಪಿಸಿದಳು ಗುಲ್ನೂರ್. ಅವನು ಗಾಂಜಾ ಮತ್ತಿನಲ್ಲಿದ್ದ. ಅಮ್ಮನ ಮಾತು ಕೇಳಿ ಪಿಳಿಪಿಳಿ ಕಣ್ಣುಬಿಟ್ಟ. ತರುವಾಯ ಮನೆಯಿಂದ ಓಡಿ ಹೋದ. ಗುಲ್ನೂರ್ ಮನೆಯೇ ತಲೆ ಮೇಲೆ ಬಿದ್ದಂತೆ ಕಿರುಚಿಕೊಂಡಳು, 'ಈಗಲೇ ಈ ಹರಾಮಜಾದಿನ ಮನೆಯಿಂದ ಆಚೆಗೆ ಓಡಿಸ್ತೀನಿ'.

ಅಕ್ಕಪಕ್ಕದ ಜನ ಜಗಲಿಗೆ ಬಂದು ತುಂಬಿಕೊಂಡರು. ಮೊತಿಜಾನ್ ಎರಡೂ ಮಕ್ಕಳನ್ನು ಎದೆಗವಚಿಕೊಂಡು ಬಂದು ಜನರ ಮುಂದೆ ನಿಂತಳು. ಗುಲ್ನೂರ್ ಒಂದೇ ಸಮನೆ ಅರಚಿಕೊಳ್ತಾನೆಯಿದ್ಲು. ಕೆಟ್ಟದಾಗಿ ಬಾಯಿಗೆ ಬಂದಂತೆ ಬೈಯ್ತಾಯಿದ್ಲು.

ಮೊತಿಜಾನ್ ತಿರುಗಿ ನಿಂತು, 'ಬಾಯಿ ಹೊಲಸು ಮಾಡ್ಕೋಬೇಡಿ, ಹೇಳ್ತಾಯಿದಿನಿ'.

ಗುಲ್ನೂರ್ ಕಿರುಚುತ್ತಾ ಹೇಳಿದಳು, 'ಇವತ್ತಿಂದ ನನ್ನ ಮನೇಲಿ ಅನ್ನವಿಲ್ಲ ನಿಂಗೆ. ನನ್ನ ಮಗನಿಗೆ ಬೇರೆ ಮದುವೆ ಮಾಡ್ತೀನಿ ನಾನು. ನನ್ನ ಮನೆ ಬೆಳಗೊ ದೀಪ ಬೇಕು'.

ಎಲ್ಲರೂ ಅವಾಕ್ಕಾಗುವಂತೆ 'ಹಿ ಹ್ಹಿ ಹ್ಹಿ' ಅಂತ ಜೋರಾಗಿ ನಕ್ಕಳು ಮೊತಿಜಾನ್. 'ವಂಶಕ್ಕೆ ಬೆಳಕು? ಥೂ, ಈ ನಿನ್ನ ಮಗನ ಜೊತೆ ಕೂತಿದ್ರೆ ಈ ಹೆಣ್ಣುಮಕ್ಕಳೂ ಸಿಗ್ತಿರಲಿಲ್ಲ ನನಗೆ.'

'ಏನ್, ಏನ್ ಹೇಳ್ದೆ ನೀನು?' ಹಳ್ಳಿಯ ಬಹಳ ಗಟ್ಟಿ ಹೆಣ್ಣು ಎಂದು ಹೆಸರಾಗಿದ್ದ ಗುಲ್ನೂರ್ ನಂಬಲಾಗದೆ ದಿಗಿಲುಗೊಂಡು ಮೊತಿಜಾನಳನ್ನು ದಿಟ್ಟಿಸುತ್ತಿದ್ದಳು. ಸುತ್ತಲೂ ನೆರೆದಿದ್ದ ಜನ ಗುಸುಗುಸು ಅಂತ ಮಾತಾಡಿಕೊಳ್ತಿದ್ದರು.

ಎರಡು ಹೆಣ್ಣುಮಕ್ಕಳನ್ನು ಎರಡೂ ಕೈಯಿಂದ ಎದೆಗವಚಿ ಹಿಡ್ಕೊಂಡಿದಾಳೆ ಮೊತಿಜಾನ್. ಅಮ್ಮನ ಎದೆಯ ಮಧ್ಯದಿಂದ ಇಣಿಕಿ ಹೊಳೆಯುವ ಕಣ್ಣುಗಳಿಂದ ಎಲ್ಲವನ್ನು ನೋಡ್ತಾಯಿದ್ರು ಆ ಮಕ್ಕಳು.

### ಸೆಲಿನಾ ಹುಸೈನ್

ಬಾಂಗ್ಲಾದೇಶದ ಕಾದಂಬರಿಗಾರ್ತಿ. 1947ರಲ್ಲಿ ರಾಜ್ ಶಾಹಿಯಲ್ಲಿ ಜನಿಸಿದರು. ದೇಶದ ಅನೇಕ ಅತ್ಯುನ್ನತ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. ಅವುಗಳಲ್ಲಿ 'ಬಾಂಗ್ಲಾ ಅಕಾಡೆಮಿ ಲಿಟರರಿ ಅವಾರ್ಡ್', ಬಾಂಗ್ಲಾ ದೇಶದ ಅತ್ಯುತ್ತಮ ನಾಗರಿಕ ಪದವಿ 'ಏಕುಶೆ ಪೊದಕ್', ಸ್ವಾತಂತ್ರ್ಯೋತ್ಸವ ಪ್ರಶಸ್ತಿಗಳನ್ನು ಹೆಸರಿಸಬಹುದು. ಅವರ ಪ್ರಸಿದ್ಧ ಕಾದಂಬರಿಗಳು, 'ಹಂಗಾರ್ ನೊದಿ ಗ್ರೇನೆಡ್' ಮತ್ತು 'ಪೊಕಾ ಮಾಕರೇರ್ ಘರ್ ಬಸತಿ'. ಇವು ಸಿನಿಮಾಗಳಾಗಿ ಕೂಡ ಪ್ರಸಿದ್ಧಿ, ಪ್ರಶಸ್ತಿ ಗಳಿಸಿವೆ.

### ನಾಗಮಣಿ ಎಸ್.ಎನ್.

ಮೂಲತಃ ಮಂಡ್ಯ ಜಿಲ್ಲೆ ಶಿವಾರ ಗ್ರಾಮದವರು; ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡ ಪ್ರಾಧ್ಯಾಪಕಿಯಾಗಿದ್ದರು. ಶಿಕ್ಷಣ ಕ್ಷೇತ್ರ, ಭಾಷಾ ಬೋಧನೆ, ಮಹಿಳಾ ವಿಷಯಗಳಲ್ಲಿ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

### ಸರಸಿಜ್ ರಾಯ್ ಚೌಧುರಿ

ಮೂಲತಃ ಕೋಲ್ಕತ್ತದವರು. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬೆಂಗಳೂರಿನಲ್ಲಿರುವ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಅಧ್ಯಯನ ನಡೆಸಿ ಭೌತಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಕನ್ನಡ, ಬಂಗಾಳಿ, ಇಂಗ್ಲಿಷ್ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ.